# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೭೪<br>No. 74 |


**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**

---

ಸಂಖ್ಯೆ: ಕಪಂರಾಸೀನಿಆ/84/ಪ್ರಾ.ಗ.ನಿ/2023 ದಿನಾಂಕ:17-01-2026

## ಪ್ರಕಟಣೆ

**ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ನಗರಾಭಿವೃದ್ಧಿ ಇಲಾಖೆಯು, ಕಲಬುರಗಿ ಜಿಲ್ಲೆಯ, ಸೇಡಂ ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸಂಸ್ಥೆಗಳನ್ನಾಗಿ ಪರಿವರ್ತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ದಿನಾಂಕ:16-12-2023ರಲ್ಲಿ ಅಧಿಸೂಚಿಸಿ ಹೊರಡಿಸಿರುವ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಪರಿವರ್ತನೆಗೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಕೈಬಿಡಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರವು, ದಿನಾಂಕ:06-01-2026 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಸೇಡಂ ತಾಲ್ಲೂಕಿನ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಸೇಡಂ ತಾಲ್ಲೂಕಿನ ಪರಿಷ್ಕೃತ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 160, 161 ಮತ್ತು 163ರ ಅನ್ವಯ ಹಾಗೂ 308 (ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು ಕಲಬುರಗಿ ಜಿಲ್ಲೆಯ, ಸೇಡಂ ತಾಲ್ಲೂಕಿನ **ಜಿಲ್ಲಾ ಪಂಚಾಯತಿ** ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. '**ಅ**' ಕೋಷ್ಟಕದ **2ನೇ** ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ಜಿಲ್ಲಾ ಪಂಚಾಯತಿ ಸದಸ್ಯರುಗಳ ಸಂಖ್ಯೆಯನ್ನು **3ನೇ** ಅಂಕಣದಲ್ಲಿ ನಿಗದಿಪಡಿಸಿದೆ.

ಕಲಬುರಗಿ ಜಿಲ್ಲೆಯ, ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು **5** ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **ಆ'** ಕೋಷ್ಟಕದ **3ನೇ** ಅಂಕಣದಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯತ್ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ **4ನೇ** ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

ಕಲಬುರಗಿ ಜಿಲ್ಲೆಯ, ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **7 (ಏಳು) ದಿವಸಗಳ ಒಳಗಾಗಿ ಅಂದರೆ ದಿನಾಂಕ:23-01-2026 ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್ ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ "ಅ"**

| ಕಲಬುರಗಿ ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| | ಸೇಡಂ | 5 |

**ಕೋಷ್ಟಕ "ಆ"**

| ಕಲಬುರಗಿ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| 1 | ಸೇಡಂ | 33-ಮಳಖೇಡ | ಮಳಖೇಡ ಜೆ, ಮಳಖೇಡ ಕೆ, ಸಮಖೇಡ, ಕುಕ್ಕುಂದಾ, ಮೀನಹಾಬಳ, ಬೀರನಳ್ಳಿ, ತೋಟ್ನಳ್ಳಿ, ಹುಣಸನಹಳ್ಳಿ, ಬೀಜನಳ್ಳಿ, ಸಂಗಾವಿ (ಎಂ), ಅರೇಬೊಮ್ಮನಹಳ್ಳಿ,ತೇಲ್ಲೂರ, ಸಂಗಾವಿ (ಟಿ), ಲೋಹಾಡ, ಸೂರವಾರ, ಹಾಬಳ ಟಿ, ಯಡ್ಡಳ್ಳಿ, ಯಡಗಾ, ಬಿಬ್ಬಳ್ಳಿ, ಕಾಚೂರ, ತರನಳ್ಳಿ, ಮುಗನೂರ, ಸಟಪಟನಹಳ್ಳಿ, ನೀಲಹಳ್ಳಿ ಹೊಸಳ್ಳಿ, ಕೊಂಕನಳ್ಳಿ, ನೃಪತುಂಗ ನಗರ, ರಾಜೀವ ನಗರ, ಭೀಮನಗರ. |
| 2 | ಸೇಡಂ | 34-ಆಡಕಿ | ಆಡಕಿ, ಜವಾಹಾರ ನಗರ, ಮದಕಲ್, ಇಂಜೇಪಲ್ಲಿ, ಕೊಂತನಪಲ್ಲಿ, ಸೋಮಪಲ್ಲಿ, ಜಾಕನಪಲ್ಲಿ, ರುದ್ರುವಾರ, ಮುನಕನಪಲ್ಲಿ, ಕಡಚರ್ಲಾ,ಜಿಲ್ಲೇಡಪಲ್ಲಿ, ಬೀದರಚೇಡ, ಗೋಪನಪಲ್ಲಿ (ಕೆ), ಇಮಾಡಾಪೂರ, ಮದರ ನಾಗಸನಪಲ್ಲಿ, ಕುರಕುಂಟಾ, ಹಯ್ಯಾಳ, ಮದನಾ, ಕಡತಾಲ, ಕೋನಾಪೂರ, ರಾಘಪೂರ. |
| 3 | ಸೇಡಂ | 35-ಕೋಡ್ಲಾ | ಕೋಡ್ಲಾ, ರಂಜೋಳ, ಸಿಂಧನಮಡು, ಹಣಮನಹಳ್ಳಿ, ಗೌಡನಳ್ಳಿ, ಮಾಧವಾರ, ಚಿಟಕನಪಲ್ಲಿ, ಅಮರವಾದಿ, ಹಾಳಹಣಮನಹಳ್ಳಿ, ಭೂತಪೂರ, ಗುಂಡಳ್ಳಿ ಬಿ, ಕಾಚವಾರ, ತುರ್ಕಬೊಮ್ಮನಳ್ಳಿ, ತುರನೂರ, ರಂಗವಾರ, ಊಡಗಿ, ಹಂಗನಹಳ್ಳಿ, ಕಲಕಂಭ, ಅಳ್ಳೊಳ್ಳಿ, ಬೆನಕನಳ್ಳಿ, ಮುಷ್ಠಳ್ಳಿ, ಮೈಲವಾರ, ನಾಮವಾರ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ಕಲಬುರಗಿ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| **4** | ಸೇಡಂ | 36-ಮುಧೋಳ | ಮುಧೋಳ, ಕೊಂಪಲ್ಲಿ ಜೆ, ಕಾನಾಗಡ್ಡಾ, ಗಂಗಾರಾವಲಪಲ್ಲಿ, ತೋಲಮಾಮಡಿ, ಯಾನಾಗುಂದಿ, ಚಂದಾಪೂರ, ಪಾಕಾಲ, ಕಿಷ್ಟಾಪೂರ, ಮೇದಕ, ಶಿಲಾರಕೋಟ, ಗಜಲಾಪೂರ, ಶಂಕರರಾಜಪೂರ, ಶಾಬಾಜಪೂರ, ನಾಡೇಪಲ್ಲಿ, ಕದ್ಲಾಪೂರ, ಬನ್ನೂರ (ಜಿ), ರಿಬ್ಬನಪಲ್ಲಿ, ಖಂಡೇರಾಯನಪಲ್ಲಿ, ಮಲ್ಲಾಬಾದ, ಅನಂತಪೂರ, ಲಿಂಗಂಪಲ್ಲಿ, ಬೊಂದೆಪಲ್ಲಿ, ಈರ್ನಾಪಲ್ಲಿ, ಗುಂಡೇಪಲ್ಲಿ (ಕೆ), ಇಂದಿರಾ ನಗರ, ರಾಜೋಳ (ಕೆ). |
| **5** | ಸೇಡಂ | 37-ಕೋಲಕುಂದಾ | ಕೋಲಕುಂದಾ, ಮಲ್ಕಾಪಲ್ಲಿ, ಗಾಡದನ್ನಾ, ವೆಂಕಟಾಪೂರ, ದುಗನೂರ, ಹಂದರಕಿ, ಹುಳಗೋಳ, ದೇವನೂರ, ಬಿಲಕಲ, ನಾಚವಾರ, ಇಟಕಾಲ, ಬುರಗಪಲ್ಲಿ, ಮೋತಕಪಲ್ಲಿ, ಶಕಲಾಸಪಲ್ಲಿ, ಗುಂತಾತಿಪಡಂಪಲ್ಲಿ, ನರೇಡ್ಲಾಪಾಡ. |

**ವಿಶೇಷ ಸೂಚನೆ:-**

**ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಚಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH